# ಮಂಡೂಕ ಪ್ರಾರ್ಥನೆ

ಬ್ರದರ್ ಬ್ರೂನೋ ಒಂದು ರಾತ್ರಿ ಪ್ರಾರ್ಥನೆ ಮಾಡುತ್ತಿದ್ದನು. ಆಗ ಭಾರಿ ಕಪ್ಪೆಯ ವಟಗುಟ್ಟುವಿಕೆಯಿಂದ ಅವನ ಏಕಾಗ್ರತೆಗೆ ಭಂಗವಾಯಿತು. ಆ ಶಬ್ದವನ್ನು ಲೆಕ್ಕಿಸದಿರಲು ಅವನು ಮಾಡಿದ ಎಲ್ಲ ಪ್ರಯತ್ನಗಳು ವ್ಯರ್ಥವಾದವು. ಆದ್ದರಿಂದ ಅವನು ತನ್ನ ಕಿಟಕಿಯಿಂದ ಹೊರಗೆ ಗಟ್ಟಿಯಾಗಿ ಕೂಗಿದನು,"ಬಾಯಿ ಮುಚ್ಚು! ನಾನು ಪ್ರಾರ್ಥನೆ ಮಾಡುತ್ತಿದ್ದೇನೆ."

ಬ್ರದರ್ ಬ್ರೂನೋ ಸಂತನಾಗಿದ್ದನು. ಆದ್ದರಿಂದ ಆತನ ಆಜ್ಞೆಯನ್ನು ತಕ್ಷಣವೇ ಪಾಲಿಸಲಾಯಿತು. ಪ್ರಾರ್ಥನೆಗೆ ಪೂರಕವಾದ ನಿಶ್ಶಬ್ದದ ಸೃಷ್ಟಿಗಾಗಿ ಎಲ್ಲ ಜೀವಂತ ಪ್ರಾಣಿಗಳು ತಮ್ಮ ಧ್ವನಿಯನ್ನು ಅದುಮಿಕೊಂಡವು.

ಆದರೆ ಈಗ ಬ್ರೂನೋ ಆರಾಧನೆಯ ಮಧ್ಯೆ ಮತ್ತೊಂದು ಶಬ್ದವು ತಲೆಹಾಕಿತು. ಅದು ಅಂತರಾಳದ ಧ್ವನಿಯಾಗಿತ್ತು. "ದೇವರು ನಿನ್ನ ಸ್ತೋತ್ರದ ಗೀತೆಯಷ್ಟೇ ಕಪ್ಪೆಯ ವಟಗುಟ್ಟುವಿಕೆಯಿಂದಲೂ ಸಂತೋಷ ಹೊಂದಬಹುಲ್ಲವೇ?" ಅದು ಕೇಳಿತು. "ಕಪ್ಪೆಯ ವಟಗುಟ್ಟುವಿಕೆಯಿಂದ ದೇವರ ಕಿವಿಗಳಿಗೆ ಯಾವ ಸಂತೋಷವಾದೀತು?" ಎಂದು ಬ್ರೂನೋ ವ್ಯಂಗ್ಯವಾಡಿದನು. ಆದರೆ ಆ ಧ್ವನಿಯು ಸೋಲಲೊಪ್ಪಲಿಲ್ಲ. "ದೇವರು ಧ್ವನಿಯನ್ನು ಏಕೆ ಆವಿಷ್ಕರಿಸಿದನೆಂದು ಭಾವಿಸಿದ್ದೀಯೆ?"ಎಂದಿತು.

ಏಕೆಂದು ಪತ್ತೆ ಹಚ್ಚಲು ಬ್ರೂನೋ ನಿರ್ಧರಿಸಿದನು. ಅವನು ಕಿಟಕಿಯಿಂದ ಹೊರಬಾಗಿ, 'ಹಾಡು!' ಎಂದು ಆಜ್ಞಾಪಿಸಿದನು. ಭಾರಿ ಕಪ್ಪೆಯ ಲಯಬದ್ಧವಾದ ವಟಗುಟ್ಟುವಿಕೆಯು ಸುತ್ತಮುತ್ತಲ ಎಲ್ಲಾ ಕಪ್ಪೆಗಳ ಹಾಸ್ಯಾಸ್ಪದ ಶಬ್ದದೊಂದಿಗೆ ಗಾಳಿಯಲ್ಲಿ ಒಂದಾಯಿತು. ಬ್ರೂನೋ ಶಬ್ದವನ್ನು ಆಲಿಸಿದನು.

ಅದನ್ನು ಆಲಿಸಿದ ಮೇಲೆ ಬ್ರೂನೋವಿನ ಹೃದಯವು ವಿಶ್ವದೊಡನೆ ಸಮರಸವಾಯಿತು. ಮೊಟ್ಟಮೊದಲ ಬಾರಿಗೆ ಅವನು ಜೀವನದಲ್ಲಿ ಪ್ರಾರ್ಥನೆ ಎಂದರೆ ಏನೆಂದು ಅರಿತನು.

* * * * *

## ನರ್ತಿಸುವ ಧರ್ಮಬೋಧಕ

*ಒಂದು ಹಸಿಡಿಕ್ ಕಥೆ ಹೀಗಿದೆ;*

ರಷ್ಯಾದ ಒಂದು ಸಣ್ಣ ಪಟ್ಟಣದ ಯೆಹೂದಿಗಳು ತಮ್ಮ ಧರ್ಮಬೋಧಕನ ಆಗಮನಕ್ಕಾಗಿ ಕಾತರದಿಂದ ಕಾಯುತ್ತಿದ್ದರು. ಅದೊಂದು ಅಪರೂಪದ ಘಟನೆಯಾಗಲಿತ್ತು. ಆದ್ದರಿಂದ ಅವರು ಪೂಜ್ಯನಿಗೆ ಕೇಳಬೇಕಾದ ಪ್ರಶ್ನೆಗಳನ್ನು ಸಿದ್ಧಪಡಿಸುವುದರಲ್ಲಿ ಸಾಕಷ್ಟು ಸಮಯವನ್ನು ಕಳೆದರು.

ಕೊನೆಗೂ ಬಂದ ಅವನನ್ನು ಅವರು ಪುರಭವನದಲ್ಲಿ ಭೇಟಿ ಮಾಡಿದರು. ಎಲ್ಲರೂ ತಮ್ಮ ಪ್ರಶ್ನೆಗಳಿಗೆ ಆತನ ಉತ್ತರಗಳನ್ನು ಕೇಳಲು ಸಿದ್ಧರಾಗಿದ್ದರಿಂದ ವಾತಾವರಣದಲ್ಲಿದ್ದ ಬಿಗುವನ್ನು ಅವನು ಗುರುತಿಸಲು ಶಕ್ತನಾದನು.

ಮೊದಲು ಅವನು ಏನನ್ನೂ ಹೇಳಲಿಲ್ಲ; ಬರಿದೆ ಅವರ ಕಣ್ಣುಗಳನ್ನು ದಿಟ್ಟಿಸಿದನು. ಒಂದು ಚಿರಕಾಲದ ಮಧುರ ಗಾನವನ್ನು ಗುನುಗುನಿಸಿದನು. ಬಹುಬೇಗನೆ ಪ್ರತಿಯೊಬ್ಬರೂ ಗುನುಗಲು ಪ್ರಾರಂಭಿಸಿದರು. ಅವನು ಹಾಡಲು ಪ್ರಾರಂಭಿಸಿದನು. ಅವರು ಅವನೊಂದಿಗೆ ಹಾಡಿದರು. ಅವನು ಗಂಭೀರವಾಗಿ ತಾಳಕ್ಕೆ ತಕ್ಕಂತೆ ಓಲಾಡುತ್ತಾ ನರ್ತಿಸಿದನು. ಯೆಹೂದಿ ಗುಂಪು ಅದನ್ನು ಅನುಸರಿಸಿತು. ನೃತ್ಯದಲ್ಲಿ ಬೇಗ ಒಂದಾದ ಅವರು ಅದರ ಹೆಜ್ಜೆಗಳಲ್ಲಿ ತನ್ಮಯರಾದರು. ಭೂಮಿಯ ಬೇರೆಲ್ಲವನ್ನೂ ಅವರು ಮರೆತರು. ಹಾಗಾಗಿ ಗುಂಪಿನ ಪ್ರತಿಯೊಬ್ಬ ವ್ಯಕ್ತಿಯು ಪರಿಪೂರ್ಣನಾದನು; ಸತ್ಯದಿಂದ ದೂರವಿರಿಸುವ ಅಂತರಂಗದ ಅವ್ಯವಸ್ಥೆಯಿಂದ ಗುಣಮುಖನಾದನು.

ನೃತ್ಯವು ನಿಧಾನವಾಗಿ ನಿಲುಗಡೆಗೆ ಬರುವಲ್ಲಿ ಹತ್ತಿರ ಹತ್ತಿರ ಒಂದು ಗಂಟೆಯೇ ತಗುಲಿತು. ತಮ್ಮೊಳಗಿನ ಉದ್ವಿಗ್ನತೆಯು ಕರಗಿಹೋಗಲು, ಅವರೆಲ್ಲರೂ ನಿಶ್ಶಬ್ದ ಶಾಂತಿಯಿಂದ ಕುಳಿತರು. ಆ ಶಾಂತಿ ಕೊಠಡಿಯನ್ನೆಲ್ಲಾ ವ್ಯಾಪಿಸಿತು. ಆಗ ಬೋಧಕನು ಆ ಸಂಜೆ ನುಡಿದ ಪದಗಳು ಇಷ್ಟೇ, 'ನಿಮ್ಮೆಲ್ಲ ಪ್ರಶ್ನೆಗಳಿಗೆ ನಾನು ಉತ್ತರಿಸಿದ್ದೇನೆಂದು ನಂಬುತ್ತೇನೆ.'

*ಜನರು ಫಕೀರನೊಬ್ಬನನ್ನು 'ದೇವರನ್ನು ನೃತ್ಯದಿಂದ ಏಕೆ ಪೂಜಿಸುತ್ತೀಯೆ?' ಎಂದು ಕೇಳಿದರು. 'ಏಕೆಂದರೆ ದೇವರನ್ನು ಪೂಜಿಸುವುದೆಂದರೆ ಆತ್ಮದ ಸಾವು. ನೃತ್ಯವು ಆತ್ಮವನ್ನು ಕೊಲ್ಲುತ್ತದೆ. ಆತ್ಮವು ಸತ್ತ ಬಳಿಕ ಎಲ್ಲ ಸಮಸ್ಯೆಗಳು ಅದರೊಂದಿಗೆ ಸಾಯುತ್ತವೆ ಆತ್ಮ ಇಲ್ಲದಲ್ಲಿ ಪ್ರೀತಿಯಿರುತ್ತದೆ, ದೇವನಿರುತ್ತಾನೆ' ಅವನು ಉತ್ತರಿಸಿದನು.*

* * * * *

## ಬ್ಯಾಲೆ ಪ್ರಾರ್ಥನೆ

ಗುರುವು ತನ್ನ ಶಿಷ್ಯರೊಂದಿಗೆ ಸಭಾಂಗಣದಲ್ಲಿ ಕುಳಿತು ಹೇಳಿದನು, "ನೀವು ಹಲವಾರು ಪ್ರಾರ್ಥನೆಗಳನ್ನು ಕೇಳಿದ್ದೀರಿ, ಹಲವಾರು ಪ್ರಾರ್ಥನೆಗಳನ್ನು ಹೇಳಿದ್ದೀರಿ. ಈ ರಾತ್ರಿ ನೀವು ಅದನ್ನು ನೋಡಬೇಕೆಂದು ನಾನು ಇಷ್ಟಪಡುತ್ತೇನೆ.'

ಆ ಕ್ಷಣ ಪರದೆಯು ಮೇಲೆದ್ದಿತು, ಬ್ಯಾಲೆಯು ಪ್ರಾರಂಭವಾಯಿತು.

* * * * *

## ಮೆಕ್ಕಾದೆಡೆ ತಿರುಗಿದ ಪಾದಗಳು

ಒಬ್ಬ ಸೂಫಿ ಸಂತನು ಮೆಕ್ಕಾಯಾತ್ರೆಗೆ ಹೊರಟನು. ಪ್ರಯಾಣದಿಂದ ಬಸವಳಿದ ಅವನು ಪಟ್ಟಣದ ಹೊರವಲಯದಲ್ಲಿ ರಸ್ತೆಯ ಬದಿ ಮಲಗಿದನು. ಇನ್ನೇನು ನಿದ್ರಿಸಬೇಕೆನ್ನುವಷ್ಟರಲ್ಲಿ ಒಬ್ಬ ಕೋಪಿಷ್ಟ ಯಾತ್ರಿಕನು ಅವನನ್ನು ಎಬ್ಬಿಸಿ "ಎಲ್ಲಾ ಆಸ್ತಿಕರು ಮೆಕ್ಕಾದೆಡೆ ತಮ್ಮ ತಲೆಬಾಗುವ ಸಮಯವಿದು. ನೀನು ಪವಿತ್ರ ಗೋಪುರದೆಡೆಗೆ ನಿನ್ನ ಪಾದಗಳನ್ನು ಚಾಚಿರುವೆ. ನೀನ್ಯಾವ ರೀತಿಯ ಮುಸ್ಲಿಮ?" ಎಂದನು.

ಸೂಫಿಯು ಅಲುಗಾಡಲಿಲ್ಲ; ಬರಿದೆ ತನ್ನ ಕಣ್ಣುಗಳನ್ನು ತೆರೆದು ಹೇಳಿದನು, "ಸೋದರನೇ, ದೇವರತ್ತ ತಿರುಗದ ಸ್ಥಳದಲ್ಲಿ ನನ್ನ ಪಾದಗಳನ್ನು ಇಟ್ಟು ಉಪಕಾರ ಮಾಡುವೆಯಾ?"

* * * * *

## ವಿಷ್ಣುಭಕ್ತನ ಪ್ರಾರ್ಥನೆ

*"ದೇವರೇ, ಮೂರು ಪ್ರಮುಖ ಪಾಪಗಳಿಗಾಗಿ ನನ್ನನ್ನು ಕ್ಷಮಿಸಬೇಕೆಂದು ನಿನ್ನನ್ನು ಕೋರುತ್ತೇನೆ: ಮೊದಲನೆಯದಾಗಿ, ನೀನು ಎಲ್ಲೆಡೆ ಇರುವೆಯೆಂದು ತಿಳಿದಿದ್ದರೂ, ನಿನ್ನ ಅನೇಕ ದೇವಾಲಯಗಳಿಗೆ ತೀರ್ಥಯಾತ್ರೆಗೆಂದು ಹೋಗಿದ್ದೇನೆ.*

*ಎರಡನೆಯದಾಗಿ, ನನ್ನ ಕ್ಷೇಮದ ಬಗ್ಗೆ ನನಗಿಂತ ನೀನು ಹೆಚ್ಚು ಕಾಳಜಿ ವಹಿಸುತ್ತೀಯೆ ಎಂಬುದನ್ನು ಮರೆತು ಸಹಾಯಕ್ಕಾಗಿ ನಿನ್ನಲ್ಲಿ ಮೊರೆಯಿಟ್ಟಿದ್ದೇನೆ. ಕಡೆಯದಾಗಿ, ನಾವು ಪಾಪಗಳನ್ನು ಮಾಡುವ ಮೊದಲೇ ಮನ್ನಿಸಿರುತ್ತೀಯೆಂದು ತಿಳಿದಿದ್ದರೂ ನಾನಿಲ್ಲಿ ಕ್ಷಮೆ ಯಾಚಿಸುತ್ತಾ ನಿಂತಿದ್ದೇನೆ."*

* * * * *

## ಅನ್ವೇಷಕ

ಹಲವು ವರ್ಷಗಳ ಶ್ರಮದ ಬಳಿಕ ಒಬ್ಬ ಅನ್ವೇಷಕನು ಬೆಂಕಿ ಹೊತ್ತಿಸುವ ಕಲೆಯನ್ನು ಕಂಡುಹಿಡಿದನು. ಅವನು ತನ್ನ ಸಾಮಗ್ರಿಗಳನ್ನು ಹಿಮ ಮುಸುಕಿದ ಉತ್ತರ ಪ್ರದೇಶಗಳಿಗೆ ಹೊತ್ತುಕೊಂಡು ಹೋದನು. ಒಂದು ಬುಡಕಟ್ಟಿಗೆ ಬೆಂಕಿಯನ್ನು ಹೊತ್ತಿಸುವ ಮತ್ತು ಉಪಯೋಗಿಸುವ ಕಲೆಯನ್ನು ಪರಿಚಯಿಸಿದನು. ಜನರು ಈ ಹೊಸ ವಸ್ತುವಿನಲ್ಲಿ ಎಷ್ಟು ತನ್ಮಯರಾದರೆಂದರೆ ಆ ಅನ್ವೇಷಕನು ಒಂದು ದಿನ ಅಲ್ಲಿಂದ ಮೆಲ್ಲನೆ ಹೊರಡುವವರೆಗೂ ಆತನನ್ನು ವಂದಿಸಬೇಕೆಂದು ಅವರಿಗೆ ಹೊಳೆಯಲೇ ಇಲ್ಲ. ಅವನು ಅಪರೂಪದ ಉದಾತ್ತ ಮಾನವರಲ್ಲಿ ಒಬ್ಬನಾದ್ದರಿಂದ, ತನ್ನನ್ನು ಸ್ಮರಿಸುವುದನ್ನಾಗಲೀ, ಗೌರವಿಸುವುದನ್ನಾಗಲೀ ಆಶಿಸುತ್ತಿರಲಿಲ್ಲ. ತನ್ನ ಅನ್ವೇಷಣೆಯಿಂದ ಜನರಿಗಾಗುವ ಲಾಭದಿಂದ ತನಗೆ ಸಿಗುವ ತೃಪ್ತಿಯನ್ನು ಮಾತ್ರ ಬಯಸುತ್ತಿದ್ದನು.

ಅನಂತರ ಅವನು ಹೋದ ಬುಡಕಟ್ಟಿನ ಜನರು ಮೊದಲಿನವರಂತೆಯೇ ಅರಿಯಲು ಆತುರಗೊಂಡಿದ್ದರು. ಆದರೆ ಸ್ಥಳೀಯ ಪಾದ್ರಿಗಳು ಅಪರಿಚಿತನಿಗೆ ಜನರ ಮೇಲಿದ್ದ ಹತೋಟಿಯನ್ನು ಕಂಡು ಈರ್ಷ್ಯೆಯಿಂದ ಅವನನ್ನು ಕೊಲೆಮಾಡಿದರು. ಅಪರಾಧದ ಬಗ್ಗೆ ಏಳುವ ಯಾವುದೇ ಅನುಮಾನವನ್ನು ಶಮನಗೊಳಿಸಲು ಅವರು ಆ ಶ್ರೇಷ್ಠ ಅನ್ವೇಷಕನ ಚಿತ್ರವನ್ನು ದೇವಾಲಯದ ಪವಿತ್ರಸ್ಥಾನದ ಮೇಲೇರಿಸಿದರು. ಅವನ ಹೆಸರನ್ನು ಗೌರವಿಸುವ ಹಾಗೆ ಮತ್ತು ಅವನ ನೆನಪು ಮಾಸದ ಹಾಗೆ ಒಂದು ಪ್ರಾರ್ಥನಾ ವಿಧಿಯನ್ನು ರೂಪಿಸಿದರು. ಪ್ರಾರ್ಥನಾ ವಿಧಿಯ ಸಣ್ಣ ಸಾಲೂ ಬದಲಾಗದಂತೆ ಅಥವಾ ಬಿಟ್ಟುಹೋಗದಂತೆ ಅತಿ ಎಚ್ಚರವಹಿಸಿದರು. ಬೆಂಕಿಯನ್ನು ಹೊತ್ತಿಸುವ ಸಾಮಗ್ರಿಗಳನ್ನು ರತ್ನಸಂಪುಟದಲ್ಲಿ ಪ್ರತಿಷ್ಠಾಪಿಸಲಾಯಿತು. ಅವುಗಳ ಮೇಲೆ

ತಮ್ಮ ಕೈಗಳನ್ನು ನಂಬಿಕೆಯಿಂದ ಇಡುವವರೆಲ್ಲರ ತೊಂದರೆಗಳು ಉಪಶಮನವಾಗುವುವು ಎಂದು ಹೇಳಲಾಯಿತು.

ಸ್ವತಃ ಮುಖ್ಯಪಾದ್ರಿಯೇ ಅನ್ವೇಷಕನ ಜೀವನ ಚರಿತ್ರೆಯನ್ನು ಸಂಗ್ರಹಿಸುವ ಕಾರ್ಯವನ್ನು ಕೈಗೊಂಡನು. ಅದು ಪವಿತ್ರ ಪುಸ್ತಕವಾಯಿತು. ಅದರಲ್ಲಿ ಅವನ ಪ್ರೀತಿ-ದಯೆ ಎಲ್ಲರಿಗೂ ಮೇಲ್ಪಂಕ್ತಿಯಾಗಿ ಬಿಂಬಿತವಾದವು. ಅವನ ಅತ್ಯುತ್ತಮ ಕಾರ್ಯಗಳು ಪ್ರಶಂಸೆಗೆ ಪಾತ್ರವಾದವು. ಅವನ ಅಪ್ರತಿಮ ನಡತೆಯು ನಂಬಿಕೆಯ ವಸ್ತುವಾಯಿತು. ಪುಸ್ತಕವು ಮುಂದಿನ ತಲೆಮಾರುಗಳಿಗೆ ಹಸ್ತಾಂತರಗೊಳ್ಳುವತ್ತ ಪಾದ್ರಿಗಳು ಗಮನವಿಟ್ಟರು. ಜೊತೆಗೆ ಅವರು ಅವನ ಮಾತುಗಳ ಅರ್ಥಗಳನ್ನು ಮತ್ತು ಅವನ ಪವಿತ್ರ ಬದುಕು ಮತ್ತು ಸಾವಿನ ಹಿರಿಮೆಯನ್ನು ಪ್ರಮಾಣಪೂರ್ವಕವಾಗಿ ತಿಳಿಸಿದರು. ತಮ್ಮ ಸಿದ್ಧಾಂತಗಳಿಗೆ ಬೆನ್ನು ತೋರಿದವರನ್ನೆಲ್ಲಾ ಕ್ರೂರವಾಗಿ ಸಾಯಿಸಿಯೋ, ಚರ್ಚಿನಿಂದ ಬಹಿಷ್ಕರಿಸಿಯೋ ನೀಡಿ ಶಿಕ್ಷಿಸುತ್ತಿದ್ದರು. ಈ ಧಾರ್ಮಿಕ ಕಾರ್ಯಗಳಲ್ಲಿ ಸಿಲುಕಿದ ಜನರು ಬೆಂಕಿ ಹೊತ್ತಿಸುವ ಕಲೆಯನ್ನು ಪೂರ್ಣವಾಗಿ ಮರೆತರು.

* * * * *

## ಅಗ್ನಿಯಾಗಿ ಬದಲಾದುದು.

*ಮರುಭೂಮಿಯ ಜನಕರ ಜೀವನದಿಂದ ;*

*ಅಬ್ಬಾತ್ ಲೋತ್ ಅಬ್ಬಾತ್ ಜೋಸೆಫರ ಬಳಿ ಬಂದು, "ತಂದೆಯೇ, ನನ್ನ ಯೋಗ್ಯತೆಗೆ ತಕ್ಕಂತೆ ನಾನು ನನ್ನದೇ ಆದ ಸಣ್ಣ ರೀತಿಯಲ್ಲಿ ವಿಧಿ, ಉಪವಾಸ, ಪ್ರಾರ್ಥನೆ, ಧ್ಯಾನ, ಧ್ಯಾನಾಸಕ್ತ ಮೌನವನ್ನು ಆಚರಿಸುತ್ತಿದ್ದೇನೆ. ಹಾಗೆಯೇ ಯಥಾಶಕ್ತಿ ನನ್ನ ಹೃದಯವನ್ನು ಕೆಟ್ಟ ಯೋಚನೆಗಳಿಂದ ದೂರವಿರಿಸಿದ್ದೇನೆ. ಈಗ ನಾನು ಮತ್ತಿನ್ನೇನು ಮಾಡಬೇಕು?" ಎಂದನು.*

*ಹಿರಿಯನು ಪ್ರತ್ಯುತ್ತರವಾಗಿ ಎದ್ದು ನಿಂತು. ಸ್ವರ್ಗದತ್ತ ಕೈಚಾಚಿದನು. ಅವನ ಬೆರಳುಗಳು ಬೆಂಕಿಯ ಹತ್ತು ದೀಪಗಳಂತೆ ಬೆಳಗಿದವು. ಅವನು ಹೇಳಿದನು, 'ಇದು, ಸಂಪೂರ್ಣವಾಗಿ ಅಗ್ನಿಯಾಗಿ ಬದಲಾಗಿದೆ.'*

* * * * *

## ಚಮ್ಮಾರನ ಪ್ರಾರ್ಥನೆ

ಒಬ್ಬ ಚಮ್ಮಾರನು ಜೆರ್ನ ಯೆಹೂದಿ ಬೋಧಕನಾದ ಐಸಾಕ್‌ನ ಬಳಿ ಬಂದು, 'ನನ್ನ ಬೆಳಗಿನ ಪ್ರಾರ್ಥನೆಯ ಬಗ್ಗೆ ಏನು ಮಾಡುವುದೆಂದು ಹೇಳಿ. ನನ್ನ ಗಿರಾಕಿಗಳು ಬಡವರು. ಅವರಿಗಿರುವುದು ಒಂದೇ ಜೊತೆ ಪಾದರಕ್ಷೆ. ಅವುಗಳನ್ನು ನಾನು ಸಂಜೆ ತಡವಾಗಿ ತೆಗೆದುಕೊಂಡು, ರಾತ್ರಿಯೆಲ್ಲಾ ಕೆಲಸ ಮಾಡುತ್ತೇನೆ. ಅವರು ಕೆಲಸಕ್ಕೆ ಹೋಗುವ ಮೊದಲೇ ಅವರ ಪಾದರಕ್ಷೆ ಸಿದ್ಧವಾಗಿರಬೇಕಿದ್ದರೆ ಮುಂಜಾನೆಯಲ್ಲಿಯೂ ಇನ್ನೂ ಕೆಲಸ ಉಳಿದಿರುತ್ತದೆ. ಇದೋ ನನ್ನ ಪ್ರಶ್ನೆ, ಮುಂಜಾನೆ ಪ್ರಾರ್ಥನೆಯನ್ನು ನಾನು ಹೇಗೆ ಮಾಡಲಿ?' ಎಂದು ಕೇಳಿದನು.

'ಇದುವರೆಗೆ ನೀನೇನು ಮಾಡುತ್ತಿದ್ದೆ?' ಪ್ರಶ್ನಿಸಿದನು ಬೋಧಕ.

"ಕೆಲವೊಮ್ಮೆ ಬೇಗ ಪ್ರಾರ್ಥನೆ ಮಾಡಲು ಧಾವಿಸಿ, ಹಿಂದಿರುಗಿ ಬಂದು ನನ್ನ ಕೆಲಸದಲ್ಲಿ ತೊಡಗುತ್ತೇನೆ. ಆದರೆ ಅದರ ಬಗ್ಗೆ ನನಗೆ ಬೇಸರವಾಗುತ್ತದೆ. ಮತ್ತೆ ಕೆಲವೊಮ್ಮೆ ಪ್ರಾರ್ಥನೆಯ ಸಮಯ ಮೀರುತ್ತದೆ. ಆಗಲೂ ನನಗೆ ನಷ್ಟವಾಯಿತೆಂದು ಭಾವಿಸುತ್ತೇನೆ. ಒಮ್ಮೊಮ್ಮೆ ಪಾದರಕ್ಷೆಗಳಿಂದ ನನ್ನ ಸುತ್ತಿಗೆಯನ್ನು ಮೇಲೆತ್ತಿದಾಗ, 'ನಾನು ಅದೆಂತಹ ದುರದೃಷ್ಟವಂತ, ನನ್ನ ಬೆಳಗಿನ ಪ್ರಾರ್ಥನೆಯನ್ನು ಮಾಡಲಾರದೆ ಹೋದೆನಲ್ಲಾ' ಎಂದು ನನ್ನ ಹೃದಯ ನಿಟ್ಟುಸಿರು ಬಿಡುವುದನ್ನು ಚೆನ್ನಾಗಿ ಕೇಳಬಲ್ಲೆ."

ಬೋಧಕ ಹೇಳಿದನು, "ನಾನು ದೇವರಾಗಿದ್ದರೆ ಪ್ರಾರ್ಥನೆಗಿಂತ ಆ ನಿಟ್ಟುಸಿರಿಗೆ ಹೆಚ್ಚು ಬೆಲೆ ಕೊಡುತ್ತಿದ್ದೆ."

* * * *

## ಅಕ್ಷರಮಾಲೆಯ ಪ್ರಾರ್ಥನೆ

*ಒಂದು ಹಸಿಡಿಕ್ ಕಥೆ ;*

ಮುಸ್ಸಂಜೆ ಜಾರುತ್ತಿತ್ತು, ಒಬ್ಬ ಬಡ ರೈತನು ಸಂತೆಯಿಂದ ಹಿಂದಿರುಗುತ್ತಿದ್ದನು. ಆಗ ತನ್ನ ಪ್ರಾರ್ಥನಾ ಪುಸ್ತಕವು ಇಲ್ಲದಿರುವುದು ಅವನಿಗೆ

ತಿಳಿಯಿತು. ಅವನ ಗಾಡಿಯ ಚಕ್ರಗಳು ಕಾಡಿನ ಮಧ್ಯಕ್ಕೆ ಬಂದಿದ್ದವು. ಪ್ರಾರ್ಥನೆಯನ್ನು ಹೇಳದೆ ಆ ದಿನವನ್ನು ಕಳೆಯುತ್ತೇನೆ ಎಂದು ಅವನಿಗೆ ಚಿಂತೆಯಾಯಿತು.

ಆಗ ಅವನು ಮಾಡಿದ ಪ್ರಾರ್ಥನೆ ಹೀಗಿದೆ, "ದೇವರೇ, ನಾನು ಬಹಳ ಮೂರ್ಖ ಕೆಲಸ ಮಾಡಿದ್ದೇನೆ. ಇಂದು ಬೆಳಿಗ್ಗೆ ನನ್ನ ಪ್ರಾರ್ಥನಾ ಪುಸ್ತಕವನ್ನು ತರದೆ ಮನೆಯಿಂದ ಹೊರಬಂದಿದ್ದೇನೆ. ನನ್ನ ನೆನಪಿನ ಶಕ್ತಿ ಎಷ್ಟಿದೆಯೆಂದರೆ ಅದಿಲ್ಲದೆ ಒಂದು ಪ್ರಾರ್ಥನೆಯನ್ನೂ ನಾನು ಮಾಡಲಾರೆ. ಆದ್ದರಿಂದ ನಾನು ಹೀಗೆ ಮಾಡುತ್ತೇನೆ; ಅಕ್ಷರಮಾಲೆಯನ್ನು ಐದು ಬಾರಿ ಬಹಳ ನಿಧಾನವಾಗಿ ಪಠಿಸುತ್ತೇನೆ. ಎಲ್ಲಾ ಪ್ರಾರ್ಥನೆಗಳ ಅರಿವಿರುವ ನೀನು ಆ ಅಕ್ಷರಗಳನ್ನು ಕ್ರಮವಾಗಿ ಜೋಡಿಸಿ ನಾನು ಮರೆತ ಪ್ರಾರ್ಥನೆಗೆ ರೂಪ ಕೊಡಬಲ್ಲೆ."

ದೇವರು ತನ್ನ ದೇವದೂತರಿಗೆ ಹೇಳಿದನು, 'ಇಂದು ನಾನು ಕೇಳಿದ ಎಲ್ಲಾ ಪ್ರಾರ್ಥನೆಗಳಿಗಿಂತ ಇದು ನಿಸ್ಸಂದೇಹವಾಗಿ ಅತ್ಯುತ್ತಮ. ಏಕೆಂದರೆ ಇದು ಸರಳ ಹಾಗೂ ಪ್ರಾಮಾಣಿಕ ಹೃದಯದಿಂದ ಹೊರಹೊಮ್ಮಿದೆ.'

* * * * *

## ಕ್ಷಮೆಯು ದೇವರ ಕಾಯಕ

ಪಾದ್ರಿಯೆದುರು ತಮ್ಮ ಪಾಪಗಳನ್ನು ನಿವೇದಿಸಿ, ದೇವನ ಕ್ಷಮಾದಾನದ ಕುರುಹಾಗಿ ಆ ಪಾದ್ರಿಯಿಂದ ಕ್ಷಮೆಯನ್ನು ಪಡೆಯುವುದು ಕ್ಯಾಥೋಲಿಕರ ಸಂಪ್ರದಾಯ. ಆದರೆ ಇದರಲ್ಲಿ ಆಗಾಗ್ಗೆ ಅಪಾಯ ಇದ್ದೇ ಇದೆ. ಪ್ರಾಯಶ್ಚಿತ್ತ ಮಾಡಿಕೊಳ್ಳುವವರು ಇದನ್ನು ದೈವಿಕ ಪಾಪಫಲದಿಂದ ತಮ್ಮನ್ನು ಕಾಪಾಡುವ ಒಂದು ಬಗೆಯ ಖಚಿತವಾದ ಪ್ರಮಾಣಪತ್ರದಂತೆ ಉಪಯೋಗಿಸುವರು. ಹಾಗಾಗಿ ದೈವಕೃಪೆಗಿಂತ ಪಾದ್ರಿಯ ಕ್ಷಮೆಯಲ್ಲಿ ಹೆಚ್ಚು ನಂಬಿಕೆ ಇಡುವರು.

ಮಧ್ಯಕಾಲದ ಇಟಲಿಯ ಚಿತ್ರಕಾರನಾದ ಪೆರುಗಿನಿಯು ಸಾಯುವಾಗ ಪಾಪನಿವೇದನೆ ಮಾಡಲು ಆಶಿಸಿದ್ದನು. ಆಮೇಲೆ ತಾನು ಈ ರೀತಿ ಕ್ಷಮೆ ಯಾಚಿಸುವುದಿಲ್ಲವೆಂದು ನಿರ್ಧರಿಸಿದನು. ಏಕೆಂದರೆ ಅವನು ಭಯದಿಂದ ತನ್ನ

ಶರೀರವನ್ನು ಕಾಪಾಡಲು ಬೇಡಿದರೆ ಅದು ಧರ್ಮದ್ರೋಹ ಹಾಗೂ ದೇವರಿಗೆ ಅವಮಾನ ಆಗುತ್ತಿತ್ತು.

ಅವನ ಆಂತರಿಕ ತೊಳಲಾಟದ ಬಗ್ಗೆ ಏನೇನೂ ಅರಿವಿರದ ಅವನ ಪತ್ನಿಯು ಒಮ್ಮೆ ಅವನನ್ನು, 'ಪಾಪನಿವೇದನೆ ಮಾಡದೆ ಸಾಯುವುದಕ್ಕೆ ಭಯವಾಗುವುದಿಲ್ಲವೇ?' ಎಂದು ಕೇಳಿದಳು. ಪೆರುಗಿನಿ ಉತ್ತರಿಸಿದನು, 'ಪ್ರಿಯೆಯೇ, ಅದನ್ನು ಈ ರೀತಿಯಲ್ಲಿ ಯೋಚಿಸು. ಚಿತ್ರ ಬರೆಯುವುದು ನನ್ನ ಉದ್ಯೋಗ. ಚಿತ್ರಕಾರನಾಗಿ ನಾನು ಶ್ರೇಷ್ಠನಾಗಿದ್ದೇನೆ. ಕ್ಷಮಿಸುವುದು ದೇವರ ಉದ್ಯೋಗ. ನಾನು ನನ್ನದರಲ್ಲಿ ಇರುವಂತೆ ಅವನು ಅವನ ಉದ್ಯೋಗದಲ್ಲಿ ಉತ್ತಮನಾಗಿದ್ದರೆ, ಹೆದರುವ ಯಾವ ಕಾರಣವೂ ನನಗೆ ಕಾಣುತ್ತಿಲ್ಲ.'

* * * * *

## ಹಾಲಿನ ಪಾತ್ರೆ ಹಿಡಿದ ನಾರದ

ಭಾರತೀಯ ಋಷಿಯಾದ ನಾರದನು ಶ್ರೀಹರಿಯ ಭಕ್ತನಾಗಿದ್ದನು. ಅವನ ಭಕ್ತಿಯು ಮಹೋನ್ನತವಾಗಿತ್ತು. ಇಡೀ ವಿಶ್ವದಲ್ಲಿ ದೇವರನ್ನು ತನ್ನಂತೆ ಮತ್ತಾರೂ ಪ್ರೀತಿಸರು ಎಂದು ಅವನು ಒಮ್ಮೆ ಆಲೋಚಿಸುವಂತೆ ಅದು ಪ್ರೇರೇಪಿಸಿತು.

ಅವನ ಹೃದಯವನ್ನು ಅರಿತ ದೇವರು, 'ನಾರದನೇ, ಗಂಗಾನದಿಯ ದಡದಲ್ಲಿರುವ ಈ ಪಟ್ಟಣಕ್ಕೆ ಹೋಗು. ಅಲ್ಲಿ ನನ್ನ ಭಕ್ತನೊಬ್ಬನು ನೆಲೆಸಿದ್ದಾನೆ. ಅವನ ಸಹವಾಸದಿಂದ ನಿನಗೆ ಒಳಿತಾಗುತ್ತದೆ' ಎಂದನು.

ನಾರದನು ಅಲ್ಲಿಗೆ ಹೋಗಿ ರೈತನನ್ನು ಕಂಡನು. ಮುಂಜಾವಿಗೇ ಏಳುತ್ತಿದ್ದ ಆ ರೈತನು ಹರಿನಾಮವನ್ನು ಒಂದೇ ಬಾರಿ ಉಚ್ಚರಿಸಿ, ನೇಗಿಲನ್ನು ಎತ್ತಿಕೊಂಡು ತನ್ನ ಜಮೀನಿಗೆ ಹೋಗಿ ದಿನವಿಡೀ ದುಡಿಯುತ್ತಿದ್ದನು. ರಾತ್ರಿ ನಿದ್ರಿಸುವ ಮೊದಲು ಮತ್ತೊಮ್ಮೆ ಹರಿನಾಮಸ್ಮರಣೆ ಮಾಡುತ್ತಿದ್ದನು. 'ಈ ಹಳ್ಳಿಗನು ದೇವರ ಭಕ್ತನಾಗಲು ಹೇಗೆ ಸಾಧ್ಯ? ದಿನವಿಡೀ ಲೌಕಿಕ ಕಾರ್ಯಗಳಲ್ಲಿ ಅವನು ಮುಳುಗಿ ಹೋಗಿರುವುದನ್ನು ಕಾಣುತ್ತಿದ್ದೇನೆ' ಎಂದು ನಾರದನು ಯೋಚಿಸಿದನು.

ಆಗ ದೇವರು ನಾರದನಿಗೆ 'ಒಂದು ಪಾತ್ರೆಯಲ್ಲಿ ಹಾಲನ್ನು ಪೂರ್ಣವಾಗಿ ತುಂಬಿ, ಪಟ್ಟಣದ ಸುತ್ತಾ ಒಂದು ಹನಿಯೂ ತುಳುಕದಂತೆ ಸುತ್ತಾಡು.ಬಳಿಕ ಹಿಂದಿರುಗಿ ಬಾ' ಎಂದನು. ಅವನು ಹೇಳಿದಂತೆಯೇ ನಾರದನು ಮಾಡಿದನು.

'ಪಟ್ಟಣದ ಸುತ್ತಾ ಓಡಾಡುವ ವೇಳೆಯಲ್ಲಿ ನೀನು ನನ್ನನ್ನು ಎಷ್ಟು ಬಾರಿ ಸ್ಮರಿಸಿದೆ?' ಎಂದನು ದೇವರು.

'ದೇವರೇ, ಒಮ್ಮೆಯೂ ಇಲ್ಲ, ಆ ಹಾಲಿನ ಪಾತ್ರೆಯಲ್ಲಿ ನನ್ನೆಲ್ಲ ಗಮನ ಹರಿಸಿದ್ದೆ. ಹಾಲು ತುಳುಕಬಾರದೆಂದು ನೀನು ಆದೇಶಿಸಿದ್ದರಿಂದ ನಾನು ಹೇಗೆ ತಾನೇ ಸ್ಮರಿಸಲಿ?' ಎಂದನು ನಾರದ.

ದೇವರು ಹೇಳಿದನು, 'ನೀನು ನನ್ನನ್ನೇ ಪೂರ್ಣ ಮರೆಯುವಷ್ಟು ಆ ಪಾತ್ರೆಯಲ್ಲಿ ತಲ್ಲೀನನಾಗಿದ್ದೆ. ಆದರೆ ಆ ರೈತನನ್ನು ನೋಡು. ಒಂದು ಸಂಸಾರವನ್ನು ಸಾಕುವ ಭಾರದಿಂದ ಬಾಗಿಹೋಗಿದ್ದರೂ ನನ್ನನ್ನು ದಿನಕ್ಕೆರಡು ಬಾರಿ ಸ್ಮರಿಸುತ್ತಾನಲ್ಲವೇ?'

* * * * *

## ಹಳ್ಳಿಗೆ ಸಹಾಯ ಸಿಗುತ್ತಿತ್ತು

ಒಂದು ಗ್ರಾಮದ ಪಾದ್ರಿಯು ಪೂಜ್ಯನಾಗಿದ್ದನು. ಆದ್ದರಿಂದ ಪ್ರತಿಬಾರಿ ಜನರಿಗೆ ತೊಂದರೆಯಾದಾಗಲೂ, ಅವರು ಅವನಿಗೆ ಶರಣಾಗುತ್ತಿದ್ದರು. ಆಗ ಅವನು ಕಾಡಿನ ವಿಶೇಷ ಸ್ಥಳಕ್ಕೆ ಹೋಗಿ ವಿಶೇಷ ಪ್ರಾರ್ಥನೆಯನ್ನು ಮಾಡುತ್ತಿದ್ದನು. ದೇವರು ಅವನ ಪ್ರಾರ್ಥನೆಗೆ ಯಾವಾಗಲೂ ಓಗೊಡುತ್ತಿದ್ದನು. ಹಳ್ಳಿಗೆ ಸಹಾಯ ಒದಗಿ ಬರುತ್ತಿತ್ತು.

ಅವನು ಸತ್ತ ಬಳಿಕ ಜನರಿಗೆ ತೊಂದರೆಯಾದಾಗ ಅವನ ಉತ್ತರಾಧಿಕಾರಿಯನ್ನು ಆಶ್ರಯಿಸಿದರು. ಅವನು ಪೂಜ್ಯನಾಗಿರಲಿಲ್ಲ. ಆದರೆ ಕಾಡಿನಲ್ಲಿದ್ದ ವಿಶೇಷ ಸ್ಥಳ ಮತ್ತು ವಿಶೇಷ ಪ್ರಾರ್ಥನೆಗಳ ರಹಸ್ಯ ಅವನಿಗೆ ಗೊತ್ತಿತ್ತು. ಆದ್ದರಿಂದ ಅವನು, 'ದೇವರೇ, ನಾನು ಪೂಜ್ಯನಲ್ಲವೆಂದು ನಿನಗೆ ತಿಳಿದಿದೆ. ಆದರೆ

ನನ್ನ ಜನರಿಗೆ ವಿರುದ್ಧವಾಗಲು ಅದನ್ನು ನೀನು ಬಳಸುವುದಿಲ್ಲವಷ್ಟೆ? ಆದ್ದರಿಂದ ನನ್ನ ಪ್ರಾರ್ಥನೆಯನ್ನು ಆಲಿಸು. ನಮ್ಮ ಸಹಾಯಕ್ಕಾಗಿ ಬಾ' ಎನ್ನುತ್ತಿದ್ದನು. ದೇವರು ಅವನ ಪ್ರಾರ್ಥನೆಗೆ ಓಗೊಡುತ್ತಿದ್ದನು. ಹಳ್ಳಿಗೆ ಸಹಾಯ ಒದಗಿ ಬರುತ್ತಿತ್ತು.

ಅವನೂ ಮೃತನಾದನು. ಜನರಿಗೆ ತೊಂದರೆಯಾದಾಗ ಅವರು ಅವನ ಉತ್ತರಾಧಿಕಾರಿಯನ್ನು ಆಶ್ರಯಿಸಿದರು. ಅವನಿಗೆ ವಿಶೇಷ ಪ್ರಾರ್ಥನೆ ತಿಳಿದಿತ್ತು. ಆದರೆ ಕಾಡಿನ ವಿಶೇಷ ಸ್ಥಳ ತಿಳಿದಿರಲಿಲ್ಲ. ಆದ್ದರಿಂದ ಅವನು, 'ದೇವರೇ, ನೀನು ಸ್ಥಳಗಳ ಬಗ್ಗೆ ಲಕ್ಷ್ಯ ಕೊಡುತ್ತೀಯೇನು? ನಿನ್ನ ಅಸ್ತಿತ್ವದಿಂದ ಎಲ್ಲ ಸ್ಥಳವೂ ಪವಿತ್ರ ಆಗದೇನು? ಆದ್ದರಿಂದ ನನ್ನ ಪ್ರಾರ್ಥನೆಯನ್ನು ಆಲಿಸು. ನಮ್ಮ ಸಹಾಯಕ್ಕಾಗಿ ಬಾ' ಎನ್ನುತ್ತಿದ್ದನು. ಆಗಲೂ ದೇವರು ಅವನ ಪ್ರಾರ್ಥನೆಗೆ ಓಗೊಡುತ್ತಿದ್ದನು. ಹಳ್ಳಿಗೆ ಸಹಾಯ ಒದಗಿ ಬರುತ್ತಿತ್ತು.

ಬಳಿಕ ಅವನೂ ಮೃತನಾದನು. ಜನರಿಗೆ ತೊಂದರೆಯಾದಾಗ ಅವರು ಅವನ ಉತ್ತರಾಧಿಕಾರಿಯನ್ನು ಆಶ್ರಯಿಸಿದರು. ಅವನಿಗೆ ವಿಶೇಷ ಪ್ರಾರ್ಥನೆಯಾಗಲೀ, ಕಾಡಿನ ವಿಶೇಷ ಸ್ಥಳವಾಗಲೀ ತಿಳಿದಿರಲಿಲ್ಲ. ಆದ್ದರಿಂದ ಅವನು, 'ದೇವರೇ, ನೀನು ಬೆಲೆ ಕೊಡುವುದು ಸೂತ್ರಕ್ಕಲ್ಲ, ತೊಂದರೆಯಲ್ಲಿರುವ ಹೃದಯಗಳ ಕೂಗಿಗೆ. ಆದ್ದರಿಂದ ನನ್ನ ಪ್ರಾರ್ಥನೆಯನ್ನು ಆಲಿಸು. ನಮ್ಮ ಸಹಾಯಕ್ಕಾಗಿ ಬಾ' ಎನ್ನುತ್ತಿದ್ದನು. ಮತ್ತೊಮ್ಮೆ ದೇವರು ಅವನ ಪ್ರಾರ್ಥನೆಗೆ ಓಗೊಡುತ್ತಿದ್ದನು. ಹಳ್ಳಿಗೆ ಸಹಾಯ ಒದಗಿ ಬರುತ್ತಿತ್ತು.

ಆತನೂ ಮೃತನಾದ ಅನಂತರ ಜನರಿಗೆ ತೊಂದರೆಯಾದಾಗ ಅವರು ಅವನ ಉತ್ತರಾಧಿಕಾರಿಯನ್ನು ಆಶ್ರಯಿಸಿದರು. ಈ ಹೊಸ ಪಾದ್ರಿಯು ಪ್ರಾರ್ಥನೆಗಿಂತ ಹಣಕ್ಕೆ ಒಲಿದಿದ್ದನು. ಆದ್ದರಿಂದ ಅವನು "ನೀನು ಅದೆಂತಹ ದೇವರು? ನೀನೇ ಸ್ವತಃ ಸೃಷ್ಟಿಸಿದ ತೊಂದರೆಗಳನ್ನು ನಿವಾರಿಸಲು ನೀನು ಪೂರ್ಣವಾಗಿ ಸಮರ್ಥನಾಗಿರುವೆ. ಆದರೂ ನಾವು ನಿನ್ನನ್ನು ದೈನ್ಯದಿಂದ ಬೇಡುತ್ತಾ ಪ್ರಾರ್ಥಿಸುವವರೆಗೂ ಬೆರಳನ್ನೂ ಮೇಲೆತ್ತಲು ನಿರಾಕರಿಸುತ್ತೀಯೆ. ಸರಿ, ಜನರೊಂದಿಗೆ ನಿನಗೆ ಹೇಗೆ ಬೇಕೋ ಹಾಗೆ ಮಾಡಿಕೋ" ಎನ್ನುತ್ತಿದ್ದನು. ಬಳಿಕ ತನ್ನ ಕೈಯಲ್ಲಿದ್ದ ವ್ಯವಹಾರದತ್ತ ಹೊರಳುತ್ತಿದ್ದನು. ಮತ್ತೆಯೂ ದೇವರು ಅವನ ಪ್ರಾರ್ಥನೆಗೆ ಓಗೊಡುತ್ತಿದ್ದನು. ಹಳ್ಳಿಗೆ ಸಹಾಯ ಒದಗಿ ಬರುತ್ತಿತ್ತು.

* * * * *